**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 20.02.2026**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಿಮ್ಮ ತಂದೆಯವರು ಮೃತರಾಗುವ ಕಾಲಕ್ಕೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ 70 ವರ್ಷ ವಯಸ್ಸಾಗಿತ್ತು ಎಂದು ಹೇಳುತ್ತಾರೆ. ನಿಮ್ಮ ತಂದೆ ತಾಯಿಗೆ ನೀವು ಮತ್ತು ವಾದಿ ಇಬ್ಬರೇ ಮಕ್ಕಳು ಎಂದರೆ ಸರಿ. ಮಕ್ಕಳುಗಳು ಹುಟ್ಟುವ ಕಾಲಕ್ಕೆ ನಿಮ್ಮ ತಂದೆ ಶಿವಣ್ಣೇಗೌಡರು ಅವರ ಕುಟುಂಬಂದ ಬೇರೆಯಾಗಿ ಭಾಗ ತೆಗೆದುಕೊಂಡು ಪ್ರತ್ಯೇಕ ವ್ಯವಹಾರ ಮಾಡಿಕೊಂಡಿದ್ದರು ಎಂದರೆ ಸರಿ. ವಾದಿ ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ 4 ನೇ ತರಗತಿವರೆಗೆ ಒದಿದ್ದಾರೆಂದು ಹೇಳುತ್ತಾರೆ. ನಾನು ಎಸ್ ಎಸ್ ಎಲ್ ಸಿ ವರೆಗೆ ಒದಿದ್ದೇನೆ. ವಾದಿಗೆ ಸಹಿ ಮಾಡುವುದು ಬಿಟ್ಟರೆ ಒದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. 1 ರಿಂದ 5, 7 ಮತ್ತು 8 ದಾವಾ ಐಟಂ ಸ್ವತ್ತುಗಮ ನಿಮ್ಮ ತಂದೆಯಿಂದ ಬಂದಿರುವ ಆಸ್ತಿಗಳು ಎಂದರೆ ಸರಿ. ಆ ಆಸ್ತಿಗಳು ಈಗಲು ನಿಮ್ಮ ತಂದೆ ಹೆಸರಿನಲ್ಲಿವೆ ಎಂದರೆ ಸರಿ. ನಿಮ್ಮ ತಂದೆ ದಿಃ 01.01.2021 ರಂದ ಮೃತರಾದರು ಎಂದರೆ ಸರಿ. ನಿಮ್ಮ ತಂದೆ ಮರಣ ಹೊಂದುವ ತನಕ ನಿಮ್ಮ ಕುಟುಂಬದ ಯಜಮಾನಿಕೆಯನ್ನು ನಿಮ್ಮ ತಂದೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನಾನು ಮಾಡುತ್ತಿದ್ದೆನು ಎಂದು ಹೇಳುತ್ತಾರೆ. ನಮ್ಮ ತಂದೆ ಅನರೋಗ್ಯಕ್ಕೆ ಒಳಗಾದ ನಂತರ ಅಂದರೆ ಅವರು ಸಾಯುವುದಕ್ಕೆ ಮುಂಚೆ ಸುಮಾರು 10 ವರ್ಷಗಳಿಂದಲೂ ನಾನೇ ವ್ಯವಹಾರ

ಮಾಡುತ್ತಿದ್ದೇನು. ನಿಮ್ಮ ತಂದೆ ಮರಣ ಹೊಂದಿದ ನಂತರ ವಾದಿ ಆಸ್ತಿಗಳನ್ನು ವಿಭಾಗ ಮಾಡಿಕೊಳೋಣ ಎಂದು ನಿಮ್ಮನ್ನು ಹಲವು ಬಾರಿ ಕೇಳಿದ್ದಾರೆ ಎಂದರೆ ಸರಿಯಲ್ಲ.

2. ದಿಃ 18.10.2021 ರಂದು ವಾದಿ ನೋಟೀಸ್ ನೀಡಿದ್ದರು ಎಂದರೆ ಸರಿ. ವಾದಿ ಕಳುಹಿಸಿದ್ದ ನೋಟೀಸ್ ನ ಸಂಗತಿಗಳು ನನಗೆ ಗೊತ್ತಿದೆ. ಆ ನೋಟೀಸ್ ಗೆ ನೀವು ಮರು ಉತ್ತರ ನೀಡಿಲ್ಲ ಎಂದರೆ ಸರಿ. ಮರು ಉತ್ತರ ಕೊಡಲು ತೊಂದರೆ ಇರಲಿಲ್ಲ. 2019 ರ ವಿಭಾಗದಂತೆ ದಾವಾಸ್ತಿಗಳ ಕಂದಾಯದಾಖಲಾತಿಗಳು ಬದಲಾವಣೀ ಆಗಿದೆಯಾ ಎಂದರೆ ಸಾಕ್ಷಿ ಆಗಿದೆ ಎಂದು ಹೇಳುತ್ತಾರೆ. ಸಾಕ್ಷಿ ಸ್ವತಃ ಕಂದಾಯ ಮಾತ್ರ ಕಟ್ಟಿದ್ದೇವೆಂದು ಹೇಳುತ್ತಾರೆ. 2019 ರಲ್ಲಿ ವಾದಿ ಮತ್ತು ನಿಮ್ಮ ನಡುವೆ ವಿಭಾಗವಾಗಿಲ್ಲದೆ ಇದ್ದರೂ ವಿಭಾಗವಾಗಿದೆ ಎಂದು ಸುಳ್ಳು ಹೇಳಿದ್ದೀರಾ ಎಂದರೆ ಸರಿಯಲ್ಲ. ದಾವಾಸ್ತಿಗಳ ಮೇಲೆ ನಿಮ್ಮ ತಂದೆ ಹಾಗೂ ಅವರ ಮಕ್ಕಳುಗಳಿಗೆ ಬಿಟ್ಟರೆ ಬೇರೆ ಯಾರಿಗೂ ಹಿತಾಸಕ್ತಿ ಇರಲಿಲ್ಲ ಎಂದರೆ ಸರಿ.

3. ವಾದಿ ಮತ್ತು ನೀವು ಒಂದೇ ಮನೆಯಲ್ಲಿ ವಾಸ ಇರುತ್ತೀರಾ ಎಂದರೆ ಸಾಕ್ಷಿ ಇಲ್ಲ ಪ್ರತ್ಯೇಕವಾಗಿ ವಾಸ ಇದ್ದೇವೆ, ವಾದಿ ಹಳೇ ಮನೆ ರಿಪೇರಿ ಮಾಡಿಸಿಕೊಳ್ಳುವುದಕ್ಕಾಗಿ ನಮ್ಮ ಮನೆಯ ಒಂದು ಕೊಠಡಿಯಲ್ಲಿ ವಾಸವಿದ್ದಾರೆಂದು ಹೇಳುತ್ತಾರೆ. ಇದಕ್ಕೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಮೌಖಿಕವಾಗಿ ಅನುಮತಿ ನೀಡಿದ್ದೇನೆಂದು ಹೇಳುತ್ತಾರೆ. ವಾದಿಗೆ ಭಾಗಾಂಶ ಕೊಡುವುದರಿಂದ ತಪ್ಪಿಸಿಕೊಳ್ಳಲು 2019 ರಲ್ಲಿ ವಿಭಾಗವಾಗಿದೆ ಎಂದು ಸುಳ್ಳು ಪ್ರತಿಪಾದಿಸುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ತಂದೆಯ ಜೀವಿತ

*ಕಾಲದಲ್ಲಿ ಯಾವುದೇ ನೊಂದಾಯಿತ ವಿಭಾಗ ಪತ್ರ ಅಥವಾ ಹಕ್ಕು ಖುಲಾಷೆ ಪತ್ರ ಅಥವಾ ವ್ಯವಸ್ಥಾ ಪತ್ರವಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಪಹಣಿಗಳು ತಾಳೆಯಾಗಿರಲಿಲ್ಲ ಆದ್ದರಿಂದ ಒಪ್ಪಿಗೆ ಪತ್ರವನ್ನು 2019 ರಲ್ಲಿ ಮಾಡಿಕೊಂಡಿದ್ದೇವೆಂದು ಹೇಳುತ್ತಾರೆ. ಒಪ್ಪಿಗೆ ಪತ್ರಕ್ಕೆ ನಾನು, ವಾದಿ, ನಮ್ಮ ತಂದೆ ಹಾಗೂ ಸಾಕ್ಷೀದಾರರುಗಳು ಸಹಿ ಮಾಡಿರುತ್ತಾರೆ. ಒಪ್ಪಿಗೆ ಪತ್ರ ಈಗ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ನೀವು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನೀವು ಹೇಳುವಂತೆ ಯಾವುದೇ ಒಪ್ಪಿಗೆ ಪತ್ರ ವಾದಿ ಮತ್ತು ನಿಮ್ಮ ನಡುವೆ ಆಗಿಲ್ಲ ಎಂದರೆ ಸರಿಯಲ್ಲ. ನಿಮ್ಮ ಕುಟುಂಬದಲ್ಲಿ ನೀವೇ ಹೆಚ್ಚು ವಿದ್ಯಾಭ್ಯಾಸ ಮಾಡಿರುವವರು ಎಂದರೆ ಸರಿ. ಮನೆಯ ವ್ಯವಹಾರಗಳನ್ನು ನಿಮ್ಮ ಮೂಲಕ ಮಾಡಿಸಬೇಕೆಂದರೆ ಸರಿ. ವಾದಿಗೆ ದಾವಾಸ್ತಿಗಳಲ್ಲಿ ಸಮನಾದ ಹಿಸ್ಸೆ ಹಕ್ಕು ಇದೆ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಸಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ನಿಡಿ.2 ರಿಂದ 24 ನ್ನು ನಿಮ್ಮ ತಂದೆಯವರ ಸೂಚನೆ ಮೇರೆಗೆ ಮಾಡಿರುತ್ತೀರಾ ಎಂದರೆ ಸರಿಯಲ್ಲ. ನೀವು ಮಾಡಿರುವ ದಾಖಲೆಗಳಿಗೆ ವಾದಿಯ ಒಪ್ಪಿಗೆ ಇರಲಿಲ್ಲ ಎಂದರೆ ಸರಿಯಲ್ಲ.*

***<u>ಮರು ವಿಚಾರಣೆ ಇಲ್ಲ.</u>***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***